Regd No B G. 155

48 th Year
ನೇ ವರ್ಷ
★
Sri 'Satyavadi'
— DAILY —
MYSORE 4

Sri

ಸತ್ಯವಾದಿ

ಸಂಸ್ಥಾಪಕರು— ಅಂಮನೆ ಸಿಂಸ್ಕೆದಾರ್ ಎಂ ಪಿ. ಸುಬ್ಬರಾಯುರು | 2 ನಪೈ

21—10—1964

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40-ನಪೈ

Protect the Cow
ಗೋಸಂರಕ್ಷಣೆ ಮಾಡಿ

ವಾರ್ತಾ ವಿಶೇಷಗಳು

ಸಿಂಸಿ— ಸರಿಯಾದ ಲೆಕ್ಕದಾರಿ ಇಲ್ಲದೆ ಹೆಚ್ಚು ಕಾಲ ನೆಲೆಸಿದ ವಾಕಿಸ್ತಾನೀ ರಾಷ್ಟ್ರೀಯ ಮಹಮದ್ ಜಾಫರನಿಗೆ ಭಟ್ಕಲ್ ಮ್ಯಾಜಿಸ್ಟ್ರೇಟರು ರೂ 50 ದಂಡ ವಿಧಿಸಿದರು ; ದಂಡ ಕೊಟ್ಟುಬಿಟ್ಟ.

★

ಬೆಂಗಳೂರು— ರಾಜ್ಯದಲ್ಲಿನ ವಾಸ್ತಾಗಿಗಾಗಿ ಸಹಕಾರಗಳು ಧನ ಮತ್ತು ಜೋಳ ಕೊಳ್ಳಲು ಸರಕಾರವು 1 ಲಕ್ಷ ರೂಗಳನ್ನು ಸ್ಯಾಂಕ್ಷನ್ನು ಮಾಡಿದೆ.

★

ಬೈರೂಟು— ನಾಲ್ಕನೇ ಲಿಬಾನೀಸ್ ಅಂತರರಾಷ್ಟ್ರೀಯ ಚಲಚಿತ್ರೋತ್ಸವದಲ್ಲಿ ಭಾರತದ 'ಕಾಶ್ಮೀರ' ಕಿ ಕಾಳಿ ಚಿತ್ರವನ್ನು ಪ್ರದರ್ಶಿಸಬಾರದೆಂದು ವಾಕಿಸ್ತಾನ ವನವಿ ನಿರಾಕರಿಸಲ್ಪಟ್ಟಿತು.

★

ಕೃಷ್ಣಾ ನದಿಯಲ್ಲಿ ನಾಗಾರ್ಜುನ ಅಣೆಕಟ್ಟಿನ ನಿವೇಶನದ ಬಳಿ 8 ಮಂದಿ ಮುಳುಗಿ ಸತ್ತರು

★

ಎಸ್ ಸಿ ಸಿ ಯಲ್ಲಿ ಈಗ ಹದಿನಾದರು ಲಕ್ಷ ಹುಡುಗರು ಮತ್ತು ಹುಡುಗಿಯರಿದ್ದಾರೆ.

★

ಕೊಯಮತ್ತೂರು ಜಿಲ್ಲೆಗೆ ತಿರುಚಿಯಿಂದ 500 ಟನ್ ಅಕ್ಕಿ ಕೊಡಲಾಗಿದೆ

★

ವಾಳೆಯ ಪಂಚಾಂಗ

ದೈವಜ್ಞಶಿರೋಮಣಿ
ಅನಂತಾನ ಮಹಾವಿದ್ವಾನ್, ಧರ್ಮಾಧಿಕಾರಿ
ರಾಜಕಾರ್ಯಾಸಕ್ತ, ಜ್ಯೋತಿರ್ವಿದ್ವನ್ಮಣಿ
ಉಪಶ್ಯಾಮಸುಂದರ ಜೋಯಿಸರವರಿಂದ

ಬುದ್ಧನ ಅವಶೇಷ

ಲಂಡನ್— ಚೆಸ್ವಿಕ್ಕಿನಲ್ಲಿರುವ ಬ್ರಿಡ್ಜಿನ ಏಕಮಾತ್ರ ಬುದ್ಧದೇವಾಲಯಕ್ಕೆ ಸಿಲೋನು ಪ್ರಧಾನಿ ಸಿರಿಮಾವೋ ಕೊಟ್ಟ ಬುದ್ಧದೇವನ ಅವಶೇಷವನ್ನು ಮೆಂವಣಿಗೆಯಲ್ಲಿ ಕೊಂಡೊಯ್ಯಲಾಯಿತು : ಹೂವಿನಿಂದ ಅಲಂಕರಿಸಲ್ಪಟ್ಟಿದ್ದ ಮಂಟಪದಲ್ಲಿ ಇಡಲಾಗಿತ್ತು ; ನೂರಾರು ಜನರು ರಸ್ತೆಯ ಎಂಡು ಕಡೆಯಲ್ಲಿಯೂ ಜನರು ನಿಂತಿದ್ದರು : ಒಂದು ಬ್ರಿಟೀಷು ಚಲಚಿತ್ರ ಸ್ಟೂಡಿಯೋ ಎಂವಾಗಿ ಕೊಟ್ಟಿದ್ದ ಬುದ್ಧನ ಪ್ರತಿಮೆಯ ಪೂರ್ವರಣೆಗೆಯಲ್ಲಿತ್ತು; ಒಂದು ಸರ್ಕಸ್ಸು ಕಂಪೆನಿಯು ಮೂರು ಆನೆಗಳೂ ಇದ್ದವು ; ರಸ್ತೆಯಲ್ಲಿ ನೃತ್ಯಗಳೊಡನೆ ಮೆರವಣಿಗೆ ಸಾಗುತ್ತಿತ್ತು.

★

ಮತ್ತೊಂದು ಪ್ರಯೋಗ

ಚೀನಾ ಇನ್ನೊಂದು ಅಣು ಪ್ರಯೋಗ ನಡೆಸುವುದಾಗಿ ಅಮೆರಿಕಾ ಸಂಸ್ಥಾನ ಕಾಂಗ್ರೆಸ್ಸಿ ಡೀಕ್ ರಸ್ಕರು ವಾಷಿಂಗ್ಟನ್ನಿನಲ್ಲಿ ಅಭಿಪ್ರಾಯಪಟ್ಟರು

★

ಭರವಸೆ

ವಾಷಿಂಗ್ಟನ್ನಿನಲ್ಲಿ ಅಧ್ಯಕ್ಷ ಜಾನ್ಸನ್ ಹೇಳಿಕೆಯೊಂದು, ಚೀನಾ ಅಣು ಶಸ್ತ್ರಗಳ ಬಗ್ಗೆ ಭೀತಿಹೊಂದಿದ ರಾಷ್ಟ್ರಗಳಿಗೆ ಅಗತ್ಯವಾದ ಕ್ಷಿಪಣಿ ಶಸ್ತ್ರಾಸ್ತ್ರಗಳನ್ನು ಒದಗಿಸುವುದಾಗಿ ತಿಳಿಸಿದರು

ಸ್ಥಳ ಬಿಡಲು ಸೂಚನೆ

ವೆಲ್ಲಸ್ವಾಮಿ ಎಂಬವನು ಸಿಂಹಳದಲ್ಲಿ ನ್ಯಾಯಬಾಹಿರವಾಗಿ ನೆಲೆಸಿರುವನೆಂದು ಬಂಧಿಸಲಾಗಿರುವುದಾಗಿ ಕೊಲಂಬೋ ವಾರ್ತೆ ಅವನು ಕೂಡಲೇ ದ್ವೀಪದಿಂದ ಹೊಂಡಬೇಕೆಂದು ಆಜ್ಞೆಮಾಡಲಾಗಿದೆ ರೂ 2 ಸಾವಿರ ವಾಸಸ್ಥಾನ ತೆರಿಗೆಯನ್ನು ಇವನಿಂದ ವಸೂಲ್ಮಾಡಲಾಗಿದೆ.

ಸಮರ್ಪಣೆ

ಭಾರತದಲ್ಲಿ ಸ್ವೀಡನ್ನಿನ ರಾಯಭಾರಿ ಕ್ರತಿನಿಧಿಯಾಗಿರುವ ಎಂ॥ ಕ್ಲಾಸ್‌ಬಂಕ್ ಅವರು ಸುಮಾರು ಮೂರು ಸಾವಿರ ಪುಸ್ತಕಗಳನ್ನು ಭಾರತದ ಶಿಕ್ಷಣ ಶಾಖೆ ಮಂತ್ರಿಗಳಿಗೆ ಸಮರ್ಪಿಸಿದರು

★

ಸುಗಮ ಕಾರ್ಯ

ಅಂದಮಾನ-ನಿಕೋಬಾರ್ ದ್ವೀಪ ಸಮೂಹದ ಸುತ್ತಲಿನ ಸಾಗರದಲ್ಲಿ ಹಡಗುಗಳ ಸಂಚಾರವನ್ನು ಸುಗಮಗೊಳಿಸಲು ಪ್ರಯತ್ನಿಸುತ್ತಿವೆ. ಅವರು ಇರುವ ಸ್ಥಳದಲ್ಲಿ ಕಡಿಯುವ ನೀರೂ ಅಪರೂಪವಾಗಿದೆ. ಜೊತೆಗೆ ಆಹಾರವನ್ನು ವಿಶೇಷವಾಗಿ ಬಳಸಬೇಕಾಗುತ್ತದೆ.

ಹಣ ಹಿಂದಕ್ಕೆ

ಬೊಂಬಾಯಿ— ಸಿನಿಮಾ ನಟ ದೇವ ಮನೋಹರ್ ಮತ್ತು ಅತನ ನಟಿ ಪತ್ನಿ ಬೀನಾ ರಾಯ್ಕರವರ ಮನೆ ಶೋಧಿಸಿ ರೂ 15 ಸಾವಿರ ಮತ್ತು ಲೆಕ್ಕಪುಸ್ತಕಗಳು ವಶಪಡಿಸಿಕೊಳ್ಳಲಾಗಿತ್ತಷ್ಟೆ ; ಅದೆಲ್ಲ ಅವರ ಮೇಲೆ ಏನೂ ಕಾರ್ಯಕ್ರಮವಿಲ್ಲವೆಂದು ತಿಳಿಸಲಾಗಿದೆ

★

ಬದಲಾವಣೆ ಇಲ್ಲ

ವಾಷಿಂಗ್ಟನ್— ಕೃಶ್ಚೇವನ್ನು ಅಧಿಕಾರದಿಂದ ತೆಗೆದುದರಿಂದ ಫಲಿತಾಂಶವಾಗಿ ಭಾರತ ಮತ್ತು ಇತರ ಆಫ್ರೋ-ಏಷ್ಯಾ ರಾಷ್ಟ್ರಗಳ ಬಗ್ಗೆ ರಷ್ಯಾ ನೀತಿಯಲ್ಲಿ ಏನೂ ಬದಲಾವಣೆ ಇಲ್ಲವೆಂದು ಪ್ರಕಟವಾಗಿದೆ

—

ಸಾವು

ಬೆಲ್ಗ್ರೇಡು— ರಷ್ಯಾ ಸೈನ್ಯದ ಮುಖ್ಯಾಧಿಕಾರಿ ಮಾರ್ಷಲ್ ಬಿಯಾರ್ಡಜೋವರು ವಿಮಾನ ಅವಘಡದಲ್ಲಿ ಮೃತರಾಗಿದ್ದಾರೆ.

ವಿವಿಧ ವಿಷಯಗಳು

ಬಿಹಾರು ಶಾಸನ ಸಭೆಯ ವಿರೋಧ ಪಕ್ಷದ 49 ಮಂದಿ ಮುಖ್ಯ ಮಂತ್ರಿ ಶ್ರೀ ಸಹಾಯಂ ಪೋಲೆ ಮಾಡಿರುವ ಆಪಾದನೆಯ ಪಾರ್ಥಮಿಕ ವಿಚಾರಣೆ ನಡೆಸಬೇಕೆಂದು ಪ್ರಧಾನಿಯವರು ಶ್ರೀ ನಂದಾರವರಿಗೆ ಹೇಳಿರುವುದಾಗಿ ನವದೆಹಲಿ ವಾರ್ತೆ.

ಅಣು ಶಸ್ತ್ರವನ್ನು ಶಾಂತಿ ಮೊದಲು ಉಪಯೋಗಿಸುವುದಿಲ್ಲವೆಂದು ಚೀನಾವು ಹೇಳಿರುವುದಕ್ಕೆ ಪಾಕಿಸ್ತಾನದಲ್ಲಿ ಹರ್ಷವಾಗಿದೆ ಎಂದು ಕರಾಚಿ ವಾರ್ತೆ ಅಣು ಶಸ್ತ್ರವನ್ನು ಭಾರತ ಅಮೆರಿಕದಿಂದ ಪಡೆಯಬಹುದೆಂದು ಕರಾಚಿಯಲ್ಲಿ ಶಂಕೆಯುಂಟಾಗಿದೆ.

ಉದಕಮಂಡಲದಿಂದ ಬಂದಿರುವ ವರದಿ ತಮಗೆ ಕೆಲವು ದಿವಸಗಳಿಂದ ಅಕ್ಕಿ ಸರಬರಾಜಾಗಿಲ್ಲವೆಂದು ಕುಂಡಾ ಹೈಡ್ರೋ ಎಲೆಕ್ಟ್ರಿಕ್ ಪ್ಲಾಂಟಿನ 4 ಸಹಸ್ರ ಕಾರ್ಮಿಕರು ಮುಷ್ಕರಿಸಿದ್ದಾರೆ.

ಕಲ್ಲೀಕೋಟೆಗೆ ಪಾಕಿಸ್ತಾನದಿಂದ ಬಂದ 5 ಸಾವಿರ ಟನ್ನು ಅಕ್ಕಿಯನ್ನು ಭಾರತ ಸರ್ಕಾರ ಕೇರಳದಲ್ಲಿ ಅಗ್ಗದ ಅಂಗಡಿಗಳ ಮೂಲಕ ಮಾರಲುಕೊಟ್ಟಿದೆ

ಮುಂದಿನ ಶಾಸನ ಸಭೆಯಲ್ಲಿ ಸರ್ಕಾರದ ಮೇಲೆ ಅವಿಶ್ವಾಸ ನಿರ್ಣಯ ತರಲು ಕವ್ಹಾನಿಸ್ಟ್ ಪಾರ್ಟಿ ನಿರ್ಧರಿಸಿತ್ತಿದೆ ಎಂದು ಹೈದರಾಬಾದು ವಾರ್ತೆ.

ವೈಸೂರು ರಾಜ್ಯದಲ್ಲಿ ನೆಲೆಸಲು ಪೂರ್ವ ಪಾಕಿಸ್ತಾನದಿಂದ ಬರುವ 3 ಸಹಸ್ರ ನಿರಾಶ್ರಿತ ಸಂಸಾರಗಳು ಮುಂದಿನ ತಿಂಗಳು ಬರುವ ನಿರೀಕ್ಷೆ ಇದೆ. ಬೆಳಗಾವಿ ಜಿಲ್ಲೆಯಲ್ಲಿ ಎಂದು ನಿರಾಶ್ರಿತ ಶಿಬಿರಗಳು ಸಿದ್ಧವಾಗುತ್ತಿವೆ.

ಕೊಯಮತ್ತೂರಿನಲ್ಲಿ ಶನಿವಾರ ವಾಜಿ ಸಬಿ ಇನ್ಸ್‌ಪೆಕ್ಟರು ಅದ ಅಜ್ಮನನ್ನು ಗುಂಡಿಕ್ಕಿ ಕೊಂದ ಬಗ್ಗೆ ನ್ಯಾಯಾಂಗ ವಿಚಾರಣೆ ನಡೆಸಲು ಮುಖ್ಯ ಮಂತ್ರಿ ಸನ್ಮತಿಸದಿದ್ದುದಕ್ಕೆ ಪ್ರತಿಪಕ್ಷ ಬಿಸಿ ವಿರೋಧ ಪಕ್ಷದವರು ಸಭಾ ತ್ಯಾಗ ಮಾಡಿದರು.

—

ರಾಷ್ಟ್ರೀಯ ಐಕ್ಯತಾ ದಿನಾಚರಣೆ

ಭಾರತಾದ್ಯಂತ ನಿನ್ನೆ ರಾಷ್ಟ್ರೀಯ ಐಕ್ಯತಾ ದಿನಾಚರಣೆ ನಡೆಯಿತು : ಜನರು ರಾಷ್ಟ್ರ ರಕ್ಷಣಾ ಪ್ರತಿಜ್ಞೆ ಸ್ವೀಕರಿಸಿದರು.

ಪರ್ವತ ಶಿಖರಾರೋಹಣ

ಹಿಮಾಲಯದ ಉತ್ತರದ 22472 ಅಡಿಗಳ ಎತ್ತರದ ಶಿಖರವನ್ನು ಭಾರತೀಯ ಪರ್ವತಾರೋಹಣ ತಂಡ ಯಶಸ್ವಿಯಾಗಿ ಹತ್ತಿದೆ.

ಹತ್ತೋಟಿಗಳು ಹೋಗಲಿ

ತಿರುಚಿ— ಆಹಾರಧಾನ್ಯ ವ್ಯಾಪಾರದ ಮೇಲಿನ ಎಲ್ಲ ಹತ್ತೋಟಿಗಳನ್ನೂ ತೆಗೆದುಹಾಕಬೇಕೆಂದು ಶಾಸನ ಸಭಾ ಸದಸ್ಯ ಶ್ರೀ ಸುಬ್ಬಯ್ಯ ಚೆಟ್ಟಿಯಾರರು ಪತ್ರಿಕಾ ಹೇಳಿಕೆ ಹೊಂಡಿಸಿರುವರು

ಭಾರತದ ಜ್ಯೋತಿಷ್ಯದ ಪ್ರಶಂಸೆ

ವಾಷಿಂಗ್ಟನ್ನ— ವಾಷಿಂಗ್ಟನ್ನು ಪೋಸ್ಟು ಪತ್ರಿಕೆಯು ಭಾರತದ ಜ್ಯೋತಿಷ್ಯದ ಬಗ್ಗೆ ಗೌರವ ಸೂಚಿಸಿದೆ : ಡೆಲ್ಲಿಯ ಬಿರ್ಲಾ ದೇವಮಂದಿರದ ಗೋಸ್ವಾಮಿ ಗಿರಿಧರಶಾಸ್ತ್ರಿಗಳು— ಸೂರ್ಯ ಚಂದ್ರ ಬುಧರ ಸಂಯೋಗದಿಂದ ತೊಂದರೆಗಳು ಕಂಡುಬಂದಿದ್ದರೂ, ಅಡ್ಡಿದಿತಂಕಗಳು ಕೂಡಿದ್ದರೂ ಜವಾನ್ಸರು ವಿಜಯಗಳಿಸುವರೆಂದು ಹೇಳಿರುವದನ್ನು ಆ ಪತ್ರಿಕೆ ಸ್ಮರಿಸಿದೆ —[illegible]ಜವಾನ್ಸರು ಹಿಂದಿನ ಜನ್ಮದಲ್ಲಿ ಹಿಂದೂ ಸನ್ಯಾಸಿಯಾಗಿದ್ದು ಗಂಗಾತೀರದಲ್ಲಿ ತಪಸ್ಸು ಮಾಡುತ್ತಿದ್ದರೆಂಬುದನ್ನು ಆದು ನಂಬಿಲ್ಲ.

[illegible]

[illegible] [illegible]ಹೆಣಿಗೆ ಯಂತ್ರಗಳಿಗೆ ಭಾರೀ ಆರ್ಡರು

ಅಮೇರಿಕಾದ ಸಿಂಗರ್ ಹೊಲಿಗೆಯಂತ್ರದ ಕಂಪೆನಿಗೆ ಭಾರತದ ಒಂದು ಕಂಪೆನಿಯು ರೂ 50 ಲಕ್ಷ ಮೌಲ್ಯದ 20000 ಹೆಣಿಗೆಯಂತ್ರಗಳಿಗೆ ಆರ್ಡರು ಕೊಟ್ಟಿದೆ.

ದಸರಾ ಮನರಂಜನೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ

ತಾ|| 21 ರಂದು ಎಗ್ಸಿಬಿಷನ್ನಿನಲ್ಲಿ ಸಂಜೆ 5 ರಿಂದ ನಾಗಸ್ವರ, ಲಾವಣಿ, ನಾಟಕ

ಗೋರಕ್ಷಣೆ ಪ್ರಾಣದಯೆಯೂ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ



ಗೋರಕ್ಷಣ ವ್ಯವಸ್ಥಾಪಕರ ವಿನಂತಿ

ಚಂದಾ ಬಾಯಿದೆ ಮುಗಿದಿರುವವರು ದಯವಾಡಿ ಪಾವತಿ ಮಾಡಬೇಕಾಗಿ ವಿನಂತಿ ; ಅಭಿಮಾನಿಗಳೂ, ಸಹಾಯಕರೂ ಆಗಿ ಹೆಚ್ಚೆಚ್ಚು ಮಂದಿ ಸೇರುವಂತೆ ಈ ಪವಿತ್ರ ಕಾರ್ಯವು ಹೆಚ್ಚೆಚ್ಚು ಪ್ರಚಾರವಾಗಲು ಸಹಕರಿಸಬೇಕೆಂದೂ ವಿನಂತಿ ; ಇವು ಹೊರ ಊರಿಗಾಗಿ ಸಂಚಿಕೆಯಲ್ಲಿ ಪ್ರಕಟವಾಗುವುದು.

ವುಡ್‌ಲ್ಯಾಂಡ್ ಅಮೋಘ 6 ನೇ ವಾರ

.... ಎ. ವಿ. ಎಂ. ರವರ ಅತ್ಯಮೋಘ ಹಿಂದಿ ಚಿತ್ರ ....

ಪೂಜಾ ಕೆ ಫೂಲ್

ತಾರಾಗಣ— ಅಶೋಕಕುಮಾರ್, ಮಾಲಾ ಸಿನ್ಹಾ, ನಿಮ್ಮಿ, ಧರ್ಮೇಂದರ್, ಪ್ರಾಣ್

[ದಿನವಹಿ 3 ಪ್ರದರ್ಶನಗಳು]

ಆಪೆರಾ ಜಯಪ್ರದ 2 ನೇ ವಾರ

ಸುಂದರ ತಮಿಳು ಚಿತ್ರ [ದಿನ 3 ಆಟಗಳು]

ವೀರಾಂಗನೆ

ಪಾತ್ರ— ಜೆಮಿನಿ ಗಣೇಶ್, ಪದ್ಮಿನಿ, ರಾಗಿಣಿ, ಬಾಲಾಜಿ, ಸುಕುಮಾರಿ, ಅಶೋಕ್

ರಣಜಿತ್‌ನಲ್ಲಿ ಜನಪ್ರಿಯ 3 ನೇ ವಾರ

— ಮನರಂಜಕ, ಬೋಧಪ್ರದ, ಆಕರ್ಷಣೀಯ ಕೌಟುಂಬಿಕ ಕನ್ನಡ ಚಿತ್ರ —

ಸಕಲರೂ ನೋಡಿ ಆನಂದಿಸಬೇಕಾದ ಅತ್ಯಮೋಘ ಕಲಾಕೃತಿ

ಮುರಿಯದ ಮನೆ [ಕನ್ನಡ]

ರಾಜಕುಮಾರ್, ಉದಯಕುಮಾರ್, ಅಶ್ವತ್ಥ್, ಬಾಲಕೃಷ್ಣ, ನಂಜಿರಹಂರಾಜು ಪಂಡರೀಬಾಯಿ, ಜಯಂತಿ ಮುಂತಾದವರು ಪಾತ್ರಧಾರಿಗಳು

ನಿರ್ದೇಶನ : ವೈ. ಆರ್. ಸ್ವಾಮಿ, ಎಂ. ಎ.

4 ವಾರಗಳು ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಿದೆ

ಪ್ರತಿ ದಿನ 3 ಆಟಗಳು — ಕರ್ನಾಟಕ ಫಿಲ್ಮ್ಸ್ ಹಂಚಿಕೆ

SHAKTI SUDHA

Superb Tonic

Help The ' Gorakshana'

" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ

ವಾರ್ಷಿಕ ಚಂದಾ 50 ನ ಪೈ

' ಗೋರಕ್ಷಣ ' ಕ್ಕೆ ಸಹಾಯದ್ರವ್ಯವನ್ನೂ ಲೇಖನಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

Edited, Printed & Published by the Proprietor 'Dharma Prachara' Nirata M. S. Krishna Rao at the Satyavadi Press, Chamarajapuram, Mysore-4.